ಸೆಳೆದಿರತಕ್ಕಂಥ ಪ್ರಮುಖವಾದಂಥ ಒಂದು ವಿಷಯ. ಅದಕ್ಕಾಗಿಯೇ ಇವತ್ತು ಬೆಳಿಗ್ಗೆ ಚರ್ಚೆ ಮಾಡಿರುವುದರಿಂದ ಇದನ್ನು ಸಮಗ್ರವಾಗಿ ಚರ್ಚೆ ಮಾಡಲು ಒಂದು ಸಮಯ ನಿಗದಿಯಾಗಬೇಕಾಗಿತ್ತು. ನೀವು ಮಧ್ಯಾಹ್ನದ ಮೇಲೆ ತೆಗೆದುಕೊಳ್ಳೋಣ, ಲಂಚ್ ಆದ ನಂತರ ಎಂದು ಹೇಳಿರುವುದರಿಂದ ಅದಕ್ಕೆ ನಾವು ಒಪ್ಪಿಕೊಂಡಿದ್ದೆವು. ಅದರ ಬಗ್ಗೆ ನಮ್ಮ ಅಭ್ಯಂತರವಿಲ್ಲ ಮಾಡಬಹುದೆಂದು. ಈಗ ಸುಮಾರು ನಾಲ್ಕೂವರೆ ಸಮಯವಾಗುತ್ತಾ ಬಂತು. 5 ಗಂಟೆಯೊಳಗಾದರು ಸಂಬಂಧಪಟ್ಟ ಸಚಿವರು ಬಂದು, ಇದಕ್ಕೆ ಸರಿಯಾದ ಒಂದು ಸಮರ್ಪಕ ಉತ್ತರ ಸಿಗದೆ ಹೋದರೆ ನಾವು ಎರಡು ಕಡೆ ಇರುವಂಥ 224 ಜನ ಶಾಸಕರು, ಆ ಒಂದು ವಿಷಯದಲ್ಲಿ ಕಳಕಳಿಯನ್ನು ತೋರಿಸಲಿಲ್ಲ, ಜನತೆಗೆ ಅನ್ಯಾಯ ಮಾಡಿದರು ಎನ್ನುವ ಒಂದು ಅಪರಾಧಕ್ಕೆ ನಾವು ಗುರಿಯಾಗಬೇಕಾಗುತ್ತದೆ. ಅದಕ್ಕಾಗಿ ನಾನು ಸಿದ್ಧನಿಲ್ಲ. ಕೊನೆಯಪಕ್ಷ ಐದು ಗಂಟೆಗಾದರೂ ಈ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಉಪಾಧ್ಯಕ್ಷರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ವಾಸ್ತವಾಂಶವಿದೆ. ನಾವು ಮತ್ತೊಂದು ಬೇರೆ ಬಿಲ್ ಅನ್ನು ತರಬೇಕೆನ್ನುವ ಒಂದು ಕಾರಣವಿತ್ತು. ಮಾನ್ಯ ಕಾನೂನು ಮಂತ್ರಿಗಳು ಮೇಲ್ಮನೆಯಲ್ಲಿರುವುದರಿಂದ ಅವರನ್ನು ಕರೆಯಿಸುತ್ತೇನೆ. ಇಲ್ಲದಿದ್ದರೆ ತಾವು 5 ಗಂಟೆಗೆ ಚರ್ಚೆಯನ್ನು ಪ್ರಾರಂಭ ಮಾಡಬಹುದು, ಅದಕ್ಕೇನೂ ಆಕ್ಷೇಪಣೆ ಇಲ್ಲ.

ಉಪಾಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ ಒಂದು ನಿಮಿಷ, ಮಾನ್ಯ ಆಲ್ಕೋಡ್ ಹನುಮಂತಪ್ಪನವರು ಏನೋ ಹೇಳುತ್ತಿದ್ದಾರೆ, ಹೇಳಿ.

(ಆ) ವಿಷಯ: ದೇವದುರ್ಗ ತಾಲ್ಲೂಕಿನ ನಾರಾಯಣಪುರ ಬಲದಂಡೆ ಕಾಲುವೆಯಲ್ಲಿ ಆಗಿರುವ ಲೋಪದೋಷಗಳ ಬಗ್ಗೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಉಪಾಧ್ಯಕ್ಷರೆ, ದೇವದುರ್ಗ ತಾಲ್ಲೂಕಿನ ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟಂತೆ, (ಎನ್ಆರ್‌ಬಿಸಿ) ನಾರಾಯಣಪುರ ಬಲದಂಡೆ ಕಾಲುವೆಯಲ್ಲಿ ಆಗಿರತಕ್ಕಂಥ ಲೋಪದೋಷಗಳ ಬಗ್ಗೆ.

ಉಪಾಧ್ಯಕ್ಷರು : ಮಾನ್ಯ ಆಲ್ಕೋಡ್ ಹನುಮಂತಪ್ಪನವರೆ, ಇದನ್ನು ಶೂನ್ಯವೇಳೆಯಲ್ಲಿ ತೆಗೆದುಕೊಳ್ಳೋಣ. ಅಷ್ಟರೊಳಗಾಗಿ ಮಾನ್ಯ ಮಂತ್ರಿಗಳು ಬರಬಹುದು.

ಶ್ರೀ ಆಲ್ಕೋಡ್ ಹನುಮಂತಪ್ಪ : ಇದು ಗಮನ ಸೆಳೆಯುವ ಸೂಚನೆ ಇರುವುದರಿಂದ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಬಂದಾಗ ಹೇಳಿದರೆ, ತಮಗೆ ಉತ್ತರ ಸಿಗುತ್ತದೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಶೂನ್ಯವೇಳೆಯಲ್ಲಿ ತೆಗೆದುಕೊಂಡರೆ ಸಾಕು.

ಉಪಾಧ್ಯಕ್ಷರು : ಆಯಿತು, ಶೂನ್ಯವೇಳೆಯಲ್ಲಿ ತೆಗೆದುಕೊಂಡರೆ, ಅಷ್ಟರೊಳಗಾಗಿ ಮಾನ್ಯ ಮಂತ್ರಿಗಳು ಬರುತ್ತಾರೆ, ಆಗ ನಿಮಗೆ ಉತ್ತರವು ಸಿಗುತ್ತದೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಉಪಾಧ್ಯಕ್ಷರೆ, ಉತ್ತರ ಬಂದಿರುವುದಿಲ್ಲ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ನಿಮ್ಮ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ. ಮಾನ್ಯ ಮಾಧುಸ್ವಾಮಿಯವರೆ, ನಿಯಮ 69 ರ ಮೇಲೆ ತಾವು ಮಾತನಾಡಬಹುದು.

8. ನಿಯಮ 69 ರ ಮೇರೆಗೆ ಚರ್ಚೆ

ವಿಷಯ: ಬೆಂಗಳೂರು ಮತ್ತು ಮೈಸೂರು ಕಾರಿಡಾರ್ ಇಶ್ಯೂನಲ್ಲಿ ಬೆಂಗಳೂರು ಸುತ್ತಮುತ್ತ ಭೂಸ್ವಾಧೀನದಲ್ಲಿ ಬಹಳಷ್ಟು ಹಗರಣಗಳು ನಡೆದಿರುವ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದು, ಬೆಂಗಳೂರಿನ ಅಕ್ಕ-ಪಕ್ಕದಲ್ಲಿ ಭೂಹಗರಣ ನಡೆದಿರುವ ಬಗ್ಗೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ತಾವು ಶೂನ್ಯ ವೇಳೆಯಲ್ಲಿ ವಿಷಯಗಳನ್ನು ತೆಗೆದುಕೊಂಡು ನಂತರ ತಾವು ಆರಂಭ ಮಾಡುವುದಕ್ಕೆ ಹೇಳಬೇಕು. ಅದು ನಮ್ಮ ಸಂಪ್ರದಾಯವಾಗಿದೆ. ಎರಡು-ಮೂರು ಇದ್ದರೆ ಅದರಲ್ಲಿ ಯಾವುದು ಪ್ರಮುಖವಾಗಿದೆ, ಅದಕ್ಕೆ ಮೊದಲು ಅವಕಾಶವನ್ನು ಮಾಡಿಕೊಡಬೇಕು.